ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5: 31

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ವಿಷಯ : ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಉದ್ಭವವಾಗಿರುವ ಬಗ್ಗೆ

ಉತ್ತರಿಸುವ ಸಚಿವರು : ಶ್ರೀ ಕೆ. ಕರುಣಾಕರ ರೆಡ್ಡಿ, ಕಂದಾಯ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ | ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮುಂಗಾರು ಮಳೆ ವಿಫಲವಾಗಿದ್ದು ಬರಗಾಲ ಪರಿಸ್ಥಿತಿ ಉದ್ಭವವಾಗಿರುವ ಬಗ್ಗೆ ವರದಿಗಳು ಸರ್ಕಾರಕ್ಕೆ ಬಂದಿವೆಯೇ? | ರಾಜ್ಯದಲ್ಲಿ ಮುಂಗಾರು ಮಳೆಯು ಮೇ ತಿಂಗಳ ಕೊನೆಯ ವಾರದಲ್ಲಿ ಆರಂಭಗೊಂಡಿರುತ್ತದೆ. ರಾಜ್ಯದಲ್ಲಿ ಮುಂಗಾರು ಮಳೆಯು ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳುಗಳ ಅವಧಿಯಲ್ಲಿ ಆಗುತ್ತದೆ. ಈಗ ಮುಂಗಾರು ಋತುವಿನ ಆರು ವಾರಗಳು ಕಳೆದಿರುತ್ತದೆ ಹಾಗೂ ಮಳೆ ಇನ್ನೂ ಸುಮಾರು ಹತ್ತು (10) ವಾರಗಳು ಬಾಕಿ ಇರುತ್ತದೆ. ಕಳೆದ 6 ವಾರಗಳ ಮಳೆ ಪ್ರಮಾಣವನ್ನು ಗಮನಿಸಿದರೆ ರಾಜ್ಯದ 6 ಜಿಲ್ಲೆಗಳಲ್ಲಿ (ಬಿಜಾಪುರ, ರಾಯಚೂರು, ಬಾಗಲಕೋಟೆ, ಗುಲ್ಬರ್ಗಾ, ಬಳ್ಳಾರಿ, ಕೊಪ್ಪಳ), ತೀವ್ರ ಮಳೆ ಕೊರತೆ, 14 ಜಿಲ್ಲೆಗಳಲ್ಲಿ (ರಾಮನಗರ, ದಾವಣಗೆರೆ, ಮೈಸೂರು, ಬೀದರ್, ಬೆಳಗಾಂ, ಹಾವೇರಿ, ಧಾರವಾಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ) ಮಳೆ ಪ್ರಮಾಣದಲ್ಲಿ ಸಾಮಾನ್ಯ ಕೊರತೆ, ಉಳಿದ 8 ಜಿಲ್ಲೆಗಳಲ್ಲಿ ವಾಡಿಕೆ ಮತ್ತು ಹೆಚ್ಚಿನ ಮಳೆ ಆಗಿರುವ ವರದಿಯಾಗಿದೆ. |
| ಆ | ಹಾಗಿದ್ದಲ್ಲಿ, ಈ ಬಗ್ಗೆ ಯಾವ ಯಾವ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. | ಎಲ್ಲಾ 29 ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ.<br>ಬೀದರ್ ಜಿಲ್ಲೆಯಲ್ಲಿ ಮುಂಗಾರು ಮಳೆಯು ಜೂನ್ 16, 2008 ರವರೆಗೆ ವಾಡಿಕೆ 212 ಮಿಲಿಮೀಟರ್ ಆಗಬೇಕಾಗಿದ್ದು ಇದುವರೆಗೂ ಜಿಲ್ಲೆಯಲ್ಲಿ ಸರಾಸರಿ |

| | | |
|---|---|---|
| ಇ | ಬೀದರ್ ಜಿಲ್ಲೆಯಲ್ಲಿಯೂ ಸಹ ಮುಂಗಾರು ಮಳೆ ವಿಫಲವಾಗಿದ್ದು ಬರಗಾಲದ ಪರಿಸ್ಥಿತಿ ಉದ್ಭವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಮಳೆಯು 123 ಮಿಲಿಮೀಟರ್ ಆಗಿರುತ್ತದೆ ಹಾಗೂ ಇದು ಶೇಕಡಾ 42 ರಷ್ಟು ಕೊರತೆ ಇದೆ. ಬೀದರ್ ಜಿಲ್ಲೆಯಲ್ಲಿ ಜೂನ್ 01 ರಿಂದ 10 ರವರೆಗೆ ಹಾಗೂ ಜೂನ್ 25 ರಿಂದ ಜುಲೈ 1 ರವರೆಗೆ ಮಳೆಯಾಗಿರುತ್ತದೆ. ಬೀದರ್ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಸತತ ನಾಲ್ಕು ವಾರಗಳ ಒಣ ಹವೆ ಪರಿಸ್ಥಿತಿ ಪ್ರಸ್ತುತ ಮುಂಗಾರಿನಲ್ಲಿ ಇದ್ದಿರುವ ಬಗ್ಗೆ ವರದಿಯಾಗಿರುವುದಿಲ್ಲ. ಈ ವರದಿಗಳ ಪ್ರಕಾರ ಬೀದರ್‌ನಲ್ಲಿ ಮುಂಗಾರು ಮಳೆ ವಿಫಲವಾಗಿದೆ ಎಂದು ಹೇಳಲು ಸದ್ಯಕ್ಕೆ ಬರುವುದಿಲ್ಲ.<br><br>ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ರಾಜ್ಯಮಟ್ಟದ ಹವಾಮಾನ ಕಾವಲು ಸಮಿತಿ ಸಭೆಯಲ್ಲಿ ಪ್ರತಿವಾರ ಮುಂಗಾರು ಮಳೆಯ ಬಗ್ಗೆ ಪರಿಶೀಲನೆ |
| ಈ | ಹಾಗಿದ್ದಲ್ಲಿ, ಸರ್ಕಾರವು ಈ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಕೈಗೊಂಡಿರುವ ಕ್ರಮಗಳೇನು? | ನಡೆಸಲಾಗುತ್ತಿದೆ. ಮಳೆಯ ಕೊರತೆ ಮುಂದುವರೆದಲ್ಲಿ ಬರಪೀಡಿತವೆಂದು ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.<br><br>ಬೀದರ್ ಜಿಲ್ಲೆಯಲ್ಲಿ ಇದುವರೆಗಿನ ಮುಂಗಾರು ಮಳೆಯ ಕೊರತೆ ಇರುವುದನ್ನು ಗಮನಿಸಿ ಪರಿಸ್ಥಿತಿಯನ್ನು ಸಂದರ್ಭೋಚಿತವಾಗಿ ನಿಭಾಯಿಸಲು ರೂ.100-00 |
| ಉ | ಇಲ್ಲಿಯವರೆಗೂ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿಗಳನ್ನು ಆರಂಭಿಸಲಾಗಿದೆಯೇ, ಹಾಗಿದ್ದಲ್ಲಿ, ಇದಕ್ಕಾಗಿ ಎಷ್ಟು ಹಣವನ್ನು ಈವರೆವಿಗೆ ವೆಚ್ಚ ಮಾಡಲಾಗಿದೆ, ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? | ಲಕ್ಷ ಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. |